ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, ಇ-mail: nregs.office@gmail.com

ಸಂಖ್ಯೆ: ಗ್ರಾಅಪ:119:ಉಖಾಯೋ:2019 **ದಿನಾಂಕ:04.02.2020**

**ಪ್ರಕಟಣೆ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಓಂಬುಡ್ಸ್‌ಮನ್‌ರವರು ಹೊರಡಿಸುವ ಆದೇಶಗಳು / ಶಿಫಾರಸ್ಸುಗಳಿಂದ ಭಾಧಿತರಾದವರು ಸಲ್ಲಿಸುವ ಮನವಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವ ಸಲುವಾಗಿ ಮೂವರು ಸದಸ್ಯರನ್ನೊಳಗೊಂಡ ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದ್ದು, ಒಬ್ಬ ಸದಸ್ಯರ ಹುದ್ದೆ ಖಾಲಿ ಇದ್ದು ಶೈಕ್ಷಣಿಕ ಅಥವಾ ನಾಗರೀಕ ಸಂಘ ಸಂಸ್ಥೆ ಕ್ಷೇತ್ರಕ್ಕೆ ಸೇರಿದ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ.

ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾಗಿ ಆಯ್ಕೆಯಾಗುವ ಅಭ್ಯರ್ಥಿಯು ಈ ಕೆಳಕಂಡ ಅಗತ್ಯ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

1. ಶೈಕ್ಷಣಿಕ (Academician) ಕ್ಷೇತ್ರ ಅಥವಾ ನಾಗರೀಕ ಸಂಘ ಸಂಸ್ಥೆ (Civil Society Organization) ಇವುಗಳಲ್ಲಿ ಯಾವುದಾದರೊಂದು ಕ್ಷೇತ್ರದಲ್ಲಿ ಕಡೆಯ 30 ವರ್ಷಗಳ ಸೇವಾನುಭವ ಇರತಕ್ಕದ್ದು.
2. ಶ್ರೇಷ್ಠತಮ ಮತ್ತು ನಿಷ್ಕಳಂಕ ಸೇವೆ ಸಲ್ಲಿಸಿರಬೇಕು.
3. ದೈಹಿಕ ಚಟುವಟಿಕೆ ಉಳ್ಳವರಾಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಕ್ಷೇತ್ರ ಭೇಟಿ ಕೈಗೊಳ್ಳಲು ಸಮರ್ಥರಿರಬೇಕು.
4. ರಾಜಕೀಯ ಪಕ್ಷದ ಮತ್ತು ನಿಷೇಧಿತ ಸಂಘ ಸಂಸ್ಥೆಗಳ ಸದಸ್ಯರಾಗಿರಬಾರದು.
5. ಗರಿಷ್ಠ ವಯಸ್ಸು 66 ವರ್ಷಗಳು ಮೀರಿರಬಾರದು.

ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರ ನೇಮಕಾತಿಯು ಮೊದಲಿಗೆ 2 ವರ್ಷದ ಅವಧಿಯದಾಗಿರುತ್ತದೆ.

ಕೇಂದ್ರ/ರಾಜ್ಯ ಸರ್ಕಾರದ ಆದೇಶಗಳ ಅನುಸಾರ ಸಿಟ್ಟಿಂಗ್ ಫೀಜು, ಸಂಭಾವನೆ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುವುದು.

ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬಹುದಮಹಡಿ ಕಟ್ಟಡ, ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸದಸ್ಯರಾಗಿ ಬೆಂಗಳೂರು ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್:www:rdpr.kar.nic.in ನಲ್ಲಿ ನಿಗಧಿತ ನಮೂನೆಯ ಅರ್ಜಿಯನ್ನು ಅವರೋಹಣ (download) ಮಾಡಿಕೊಂಡು, ತಮ್ಮ ಭಾವಚಿತ್ರವನ್ನೊಳಗೊಂಡ ವ್ಯಕ್ತಿತ್ವ ಪರಿಚಯದ, ಶೈಕ್ಷಣಿಕ (Academician) ಕ್ಷೇತ್ರ ಅಥವಾ ನಾಗರೀಕ ಸಂಘ ಸಂಸ್ಥೆ (Civil Society Organization) ಇವುಗಳಲ್ಲಿ ಕನಿಷ್ಠ 30 ವರ್ಷಗಳು ಕಾರ್ಯನಿರ್ವಹಿಸಿದ ಅನುಭವದ ದಾಖಲೆ ಹಾಗೂ ಇತರೆ ಅವಶ್ಯಕ ದಾಖಲೆಗಳೊಂದಿಗೆ **ದಿನಾಂಕ:25.02.2020 ರೊಳಗೆ** ತಲುಪುವಂತೆ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಬಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಹಂತ, 2ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಸಲ್ಲಿಸುವುದು. ನಿಗಧಿ ಪಡಿಸಿರುವ ದಿನಾಂಕದ ನಂತರ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:080-22342163 ಅನ್ನು ಸಂಪರ್ಕಿಸಬಹುದಾಗಿದೆ,).

ಆಯುಕ್ತರು ಗ್ರಾಮೀಣಾಭಿವೃದಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಭಾವಚಿತ್ರ

## ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರ ನೇಮಕಾತಿಯ ಅರ್ಜಿ ನಮೂನೆ:

| | | |
|---|---|---|
| 1 | ವೈಯಕ್ತಿಕ ಮಾಹಿತಿ ವಿವರ : | |
| 1.1 | ಹೆಸರು : | |
| 1.2 | ವಯಸ್ಸು : (25.02.2020 ದಿನಾಂಕದಲ್ಲಿದ್ದಂತೆ)<br>(ಜನನ ಪ್ರಮಾಣ ಪತ್ರ ಲಗತ್ತಿಸುವುದು) | |
| 1.3 | ಅಂಚೆ ವಿಳಾಸ ಅಥವಾ ಪತ್ರ ವ್ಯವಹಾರದ ವಿಳಾಸ: | |
| 1.4 | ದೂರವಾಣಿ/ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ: | |
| 1.5 | ಖಾಯಂ ವಿಳಾಸ :<br>(ವಾಸಸ್ಥಳದ ರುಜುವಾತು ದಾಖಲಾತಿಯನ್ನು ಲಗತ್ತಿಸುವುದು) | |
| 1.6 | ನೀವು ವೈದ್ಯಕೀಯವಾಗಿ (ದೈಹಿಕವಾಗಿ & ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ಧೃಢಕಾಯರಾಗಿರುವಿರಾ? (ಧೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು) | |
| 1.7 | ರಾಜಕೀಯ ಪಕ್ಷದ ಸದಸ್ಯರೇ ?<br>(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಪ್ರಮಾಣ ಪತ್ರವನ್ನು ಲಗತ್ತಿಸುವುದು.) | |
| 1.8 | ಅ)ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ ?<br>ಆ)ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ?/ಯಾವುದೇ ಇಲಾಖಾ ವಿಚಾರಣೆ ಬಾಕಿ ಇದೆಯೇ?<br>(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು) | |
| 1.9 | ಯಾವುದೇ ಸಾಮರ್ಥ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ ಹೊಂದುವಿರಾ? | |
| 2 | ವೃತ್ತಿ ಪರ ಮಾಹಿತಿ ವಿವರ : | |
| 2.1 | ವಿದ್ಯಾರ್ಹತೆ :<br>(ಅಧಿಕೃತ ಪ್ರಮಾಣ ಪತ್ರವನ್ನು ಲಗತ್ತಿಸುವುದು).<br>(ಕನಿಷ್ಠ ವಿದ್ಯಾರ್ಹತೆ: ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿ) | |
| 2.2 | ಅತ್ಯುತ್ತಮ ಸೇವೆ ಸಲ್ಲಿಸಿದ ಎಷ್ಟು ವರ್ಷಗಳ ಅನುಭವವಿದೆ :<br>(ಧೃಢೀಕರಿಸಿದ ಅಧಿಕೃತ ಪ್ರಮಾಣ ಪತ್ರವನ್ನು ಲಗತ್ತಿಸುವುದು). | |
| 2.3 | ಕ್ಷೇತ್ರ ಅನುಭವ: ಶೈಕ್ಷಣಿಕ ಕ್ಷೇತ್ರ ಅಥವಾ ನಾಗರೀಕ ಸಂಘ ಸಂಸ್ಥೆಗಳಲ್ಲಿ 30 ವರ್ಷ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರಬೇಕು. | |
| 2.4 | ಈ ಹಿಂದೆ ಕಾರ್ಯ ನಿರ್ವಹಿಸಿದ್ದ ಹುದ್ದೆಯ ಗರಿಷ್ಠ ಸ್ಥಾನಮಾನ : | |
| 2.5 | ಯಾವುದಾದರೂ ಸೊಸೈಟಿ/ವೃತ್ತಿಕಾಯ ಸಂಸ್ಥೆಯ ಸದಸ್ಯರೇ? ಇದ್ದಲ್ಲಿ ವಿವರಗಳನ್ನು ನೀಡುವುದು : | |
| 3 | ಸ್ವಯಂ ಘೋಷಣೆ: | |

ಮೇಲೆ ನಾನು ನೀಡಿದ ಮಾಹಿತಿಯು ತಪ್ಪೆಂದು ಕಂಡು ಬಂದಲ್ಲಿ ಅನ್ವಯವಾಗುವ ಕಾನೂನಿನ್ವಯ/ MGNREGA ಮಾರ್ಗಸೂಚಿಯನ್ವಯ ಕ್ರಮ ಜರುಗಿಸಬಹುದೆಂದು ಅರ್ಥೈಸಿಕೊಂಡಿದ್ದೇನೆ.

ದಿನಾಂಕ:

ಸ್ಥಳ: ಅರ್ಜಿದಾರರ ಹೆಸರು ಮತ್ತು ಸಹಿ: